ಇದನ್ನು ಎಷ್ಟು ದಿವಸಗಳವರೆಗೆ ಎಂದರೆ ಬಹುಶಃ ಅದನ್ನು ನಾವು ಕ್ರೋಢೀಕರಿಸಿಕೊಂಡು ಅದಕ್ಕೆ ಸಂಬಂಧಪಟ್ಟ ವಿಚಾರಗಳಲ್ಲಿ ಕ್ರಮವನ್ನು ಏನು ಕೈಗೊಳ್ಳಬೇಕಾಗುತ್ತದೆ. ಇದರಲ್ಲಿ ನಾವು ಯಾವುದನ್ನು ಒಪ್ಪಬೇಕಾಗುತ್ತದೆ, ಯಾವುದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ, ಆಡಳಿತಾತ್ಮಕವಾಗಿ ಯಾವುದನ್ನು ತೆಗೆದುಕೊಳ್ಳಬೇಕು ಎಂಬ ಕ್ರಮದ ಬಗ್ಗೆ ಏನು ಎಂದು ಹೇಳುತ್ತಿರುವ ಬಗ್ಗೆ ವಿವರವಾದಂಥ ಒಂದು ಆ್ಯಕ್ಷನ್ ಟೇಕನ್ ರಿಪೋರ್ಟ್‌ನ್ನು ಮಾಡಿಸಿ ಬಹಳ ಶೀಘ್ರವಾಗಿ ಕೊಡುತ್ತೇವೆ. ನಾವು ಶೀಘ್ರ ಎಂದು ಹೇಳಿದ ಕೂಡಲೇ, ತಾವು ಸಮಯವನ್ನು ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೀರಿ. ಈ ದಿನ ಸದನದ ಕೊನೆಯ ದಿವಸವಾಗಿರುವುದರಿಂದ ಮುಂದಿನ ಒಂದು ತಿಂಗಳೊಳಗಾಗಿ ಖಂಡಿತವಾಗಿ ಇದರ ಬಗ್ಗೆ ಕ್ರಮವನ್ನು ಕೈಗೊಳ್ಳುವಂಥ ಪ್ರಯತ್ನವನ್ನು ಮಾಡುತ್ತೇವೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ನವೆಂಬರ್‌ನಲ್ಲಿ ತಾವು ಕೊಟ್ಟಿರುವಂಥ ಉತ್ತರಕ್ಕೂ ಏಪ್ರಿಲ್‌ನಲ್ಲಿ ಕೊಟ್ಟಿರುವಂಥ ಉತ್ತರಕ್ಕೂ ಏನು ವ್ಯತ್ಯಾಸವಿದೆ.

ಶ್ರೀ ಎಂ.ಪಿ. ನಾಣಯ್ಯ : ನಾನು ವ್ಯತ್ಯಾಸವಿರುವ ಬಗ್ಗೆ ಹೇಳುತ್ತೇನೆ. ತಾವು ಏತಕ್ಕಾಗಿ ಕೇಳುತ್ತಿದ್ದೀರೆಂದು ನನಗೂ ಗೊತ್ತಿದೆ.

ಶ್ರೀ ಎಸ್. ಸುರೇಶ್ ಕುಮಾರ್ : ಇದರಲ್ಲಿ ವ್ಯತ್ಯಾಸದ ಪ್ರಶ್ನೆಯೇ ಇಲ್ಲ. ನೀವು ಮಾಡಬೇಕಾಗಿರುವ ಕೆಲಸವನ್ನು ಮಾಡಿಲ್ಲ. ಏತಕ್ಕೆ ತಾವು ಮಾಡಲಿಲ್ಲ, ಅದರ ಉದ್ದೇಶವೇನು?

ಶ್ರೀ ಕೆ.ಎಸ್. ಈಶ್ವರಪ್ಪ : ನಾವು ಅಸೆಂಬ್ಲಿಯಲ್ಲಿ ಚರ್ಚೆ ಮಾಡಿದೆವು. ಇವರು ಹೇಳಿದರೂ ನೀವೇ ಕಾರಣ ಎಂದು. ಇವತ್ತು ಜಗನ್ನಾಥಶೆಟ್ಟಿಯವರ ವರದಿ ಬಂದಿದೆ. ಕಳೆದ ಅಧಿವೇಶನದಲ್ಲೂ ಸಹ ಈ ವರದಿ ಬಂದಿದೆ ಎಂದು ತಾವು ಹೇಳಿದ್ದೀರಿ.

ಶ್ರೀ ಎಂ.ಪಿ. ನಾಣಯ್ಯ : ವರದಿಯನ್ನು ಯಾವುದೇ ಕಾರಣಕ್ಕೂ ಮುಚ್ಚಿಡುವುದಕ್ಕೆ ಸಾಧ್ಯವಿಲ್ಲ. ಆ ವರದಿಯು ಬಂದಿರುವುದಂತು ನಿಜ. ಆ ವರದಿಯ ಬಗ್ಗೆ ಸರ್ಕಾರ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬ ಬಗ್ಗೆಯೂ ಸಹ ಹೇಳಿದ್ದೇನೆ, ಕಳೆದ ಸಂದರ್ಭದಲ್ಲಿಯೂ ಸಹ ನಾನು ಈ ಬಗ್ಗೆ ಹೇಳಿದ್ದೇನೆ. ಇದರ ಬಗ್ಗೆ ಗೃಹ ಇಲಾಖೆಯಲ್ಲಿ ಇದನ್ನು ಸಂಪೂರ್ಣವಾಗಿ ಪರಿಶೀಲನೆಯನ್ನು ಮಾಡುತ್ತಿದ್ದಾರೆ.

(ಗೊಂದಲ)

(ಶ್ರೀ ವಿಶ್ವೇಶ್ವರ ಹೆಗಡೆ, ಅರಗ ಜ್ಞಾನೇಂದ್ರ, ಶಿವಾನಂದ ನಾಯ್ಕ್, ಎನ್.ಯೋಗೀಶ್ ಭಟ್ ಇವರು ಧರಣಿ ಕೂಡಲೂ ಬಾವಿಗೆ ಬಂದರು)

ಶ್ರೀ ಕೆ.ಎಸ್. ಈಶ್ವರಪ್ಪ : ಇದು ಸರ್ಕಾರಕ್ಕೆ ಗೌರವ ತರುತ್ತದೆಯೇ?

ಛೇರಮನ್ : ನೀವು ಬಾವಿಯಲ್ಲಿ ನಿಂತುಕೊಂಡು ಮಾತನಾಡಿದರೆ ಅದು ರೆಕಾರ್ಡಿಗೆ ಹೋಗುವುದಿಲ್ಲ. ನಾನು ಹೇಳುವುದನ್ನು ಕೇಳಿ, ನೀವು ಶೂನ್ಯ ಪ್ರಶ್ನೋತ್ತರ ವೇಳೆಯಲ್ಲೂ ಸಹ ಧರಣಿ ಮಾಡುವುದು. ಪ್ರಶ್ನೋತ್ತರ ವೇಳೆಯಲ್ಲೂ ಸಹ ಧರಣಿ ಮಾಡುವುದು. ಯಾವ ಯಾವ ಸಂದರ್ಭದಲ್ಲಿ ಧರಣಿ